# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಶ್ರೀಮತಿ ಮಂಜುಳ.ಬಿ.ಎನ್, ಅಧ್ಯಕ್ಷರು, ಹೆಗ್ಗೆರೆ ಗ್ರಾಮ ಪಂಚಾಯಿತಿ, ತುಮಕೂರು ತಾಲ್ಲೂಕು, ತುಮಕೂರು ಜಿಲ್ಲೆ, ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 43(ಎ) ರನ್ವಯ ಕ್ರಮ ಕೈಗೊಳ್ಳುವ ಬಗ್ಗೆ.

ಓದಲಾಗಿದೆ:

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ತುಮಕೂರು ಇವರ ಪತ್ರ ಸಂಖ್ಯೆ: ತುಜಿಪ/ವಿವ-03/ಅವ್ಯವಹಾರ/183/2017-18 ದಿನಾಂಕ: 25.11.2017.
2. ಸರ್ಕಾರದ ಪತ್ರ ಸಂಖ್ಯೆ: ಗ್ರಾಅಪ1382:ಗ್ರಾಪಂಅ:2017, ದಿನಾಂಕ:01.01.2018ರ ಕಾರಣ ಕೇಳುವ ನೋಟಿಸ್.
3. ಶ್ರೀಮತಿ ಮಂಜುಳ.ಬಿ.ಎನ್, ಅಧ್ಯಕ್ಷರು, ಹೆಗ್ಗೆರೆ ಗ್ರಾಮ ಪಂಚಾಯಿತಿ, ಇವರು ಕಾರಣ ಕೇಳುವ ನೋಟಿಸ್‌ಗೆ ನೀಡಿರುವ ಲಿಖಿತ ಹೇಳಿಕೆ ದಿನಾಂಕ:27.01.2018.
4. ಇದೇ ಸಮಸಂಖ್ಯೆಯ ವಿಚಾರಣಾ ನೋಟೀಸಿನ ದಿನಾಂಕ: 25.01.2019 ವಿಚಾರಣೆ ನಡೆದ ದಿನಾಂಕ: 29.01.2019

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ: (1) ರಲ್ಲಿ ಶ್ರೀಮತಿ ಮಂಜುಳ ಬಿ.ಎನ್. ಅಧ್ಯಕ್ಷರು, ಹೆಗ್ಗೆರೆ ಗ್ರಾಮ ಪಂಚಾಯಿತಿ, ತುಮಕೂರು ತಾಲ್ಲೂಕು, ತುಮಕೂರು ಜಿಲ್ಲೆ ರವರು ದಿನಾಂಕ:20.10.2016 ರಿಂದ 22.02.2017 ರವರೆಗೆ ಸತತವಾಗಿ ನಾಲ್ಕು ಸಭೆಗಳನ್ನು ನಡೆಸಿರುವುದಿಲ್ಲ ಮತ್ತು 2016-17ನೇ ಸಾಲಿನಲ್ಲಿ ಕೇವಲ ಏಳು ಸಭೆಗಳನ್ನು ನಡೆಸಿರುತ್ತಾರೆ. 2016-17ನೇ ಸಾಲಿನ ಗ್ರಾಮ ಪಂಚಾಯಿತಿ ನಿಧಿ 1 ರಲ್ಲಿನ ಅನುದಾನವು ಗ್ರಾಮ ಪಂಚಾಯಿತಿ ಸಿಬ್ಬಂದಿಗಳ ವೇತನ ಮತ್ತು ಗ್ರಾಮ ಪಂಚಾಯಿತಿ ಚುನಾಯಿತ ಪ್ರತಿನಿಧಿಗಳ ಗೌರವ ಧನಗಳನ್ನು ಪಾವತಿಸುವ ಉದ್ದೇಶಗಳಿಗೆ ಮಾತ್ರ ಬಳಸಬೇಕಾಗಿರುತ್ತದೆ. ಆದರೆ ಸದರಿ ಅನುದಾನವನ್ನು ನಿಯಮಬಾಹಿರವಾಗಿ ಆಶ್ರಯ ಎಂಟರ್‌ಪ್ರೈಸಸ್, ತುಮಕೂರು ರವರಿಂದ ಬೀದಿ ದೀಪ ಸಾಮಾಗ್ರಿ ಖರೀದಿಸಿದ್ದು, ಒಟ್ಟು ರೂ.3,25,911/-ಗಳಾಗಿರುತ್ತದೆ. ಖರೀದಿ ಪ್ರಕ್ರಿಯೆಯಲ್ಲಿ ಪ್ರಕಟಣೆ, ವೋಚರ್ಸ್, ತುಲನಾತ್ಮಕ ದರಪಟ್ಟಿ ಇರುವುದಿಲ್ಲ ಮತ್ತು ಟೆಂಡರ್ ಮುಖಾಂತರ ಸಾಮಾಗ್ರಿ ಖರೀದಿಸದೆ ಕೆ.ಟಿ.ಪಿ.ಪಿ ನಿಯಮ ಉಲ್ಲಂಘಿಸಿರುತ್ತಾರೆ. 2015-16 ನೇ ಸಾಲಿನ ಗ್ರಾಮ ಪಂಚಾಯಿತಿ ನಿಧಿ 2 ರಲ್ಲಿನ ಕುಡಿಯುವ ನೀರಿನ ನಿರ್ವಹಣೆಗೆ ಅನುದಾನಕ್ಕೆ ವಿನಿಯೋಗಿಸಿದ್ದು, ರೂ.1,69,196/-ಗಳನ್ನು ಕುಡಿಯುವ ನೀರಿನ ಸಾಮಾಗ್ರಿಗಳ ಖರೀದಿ ಮಾಡಿರುತ್ತಾರೆ ಹಾಗೂ ಈ ಸಂಬಂಧ ಯಾವುದೇ ದಾಖಲಾತಿಗಳನ್ನು ಪಡೆದು ನಿಯಮಾನುಸಾರ ಕರ್ತವ್ಯ ನಿರ್ವಹಿಸದೆ ಕೆ.ಟಿ.ಪಿ.ಪಿ ನಿಯಮ ಉಲ್ಲಂಘಿಸಿರುತ್ತಾರೆ. 2015-16 ನೇ ಸಾಲಿನ ಗ್ರಾಮ ಪಂಚಾಯಿತಿನಿಧಿ 2 ರಲ್ಲಿ ರೂ.15,500/-ಗಳ ಮೊತ್ತವನ್ನು ಶೆಟ್ಟಪ್ಪನಪಾಳ್ಯ ಮುಖ್ಯ ರಸ್ತೆಯಲ್ಲಿ ಜಂಗಲ್ ತೆಗೆಯುವ ಕಾಮಗಾರಿಗೆ ನೀಡಿದ್ದು, ಸದರಿ ಕಾಮಗಾರಿಯನ್ನು ಕ್ರಿಯಾ ಯೋಜನೆಯಲ್ಲಿ ಅಳವಡಿಸಿ ಸಂಬಂಧಪಟ್ಟವರಿಂದ ಅನುಮೋದನೆ ಪಡೆದಿರುವುದಿಲ್ಲ ಮತ್ತು ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಲ್ಲಿ ಅಳವಡಿಸಿ, ಹಣ ಪಾವತಿ ಮಾಡದೆ ಸರ್ಕಾರದ ಆದೇಶವನ್ನು ಉಲ್ಲಂಘಿಸಿ ಹಣ ಪಾವತಿಸಿ ಕರ್ತವ್ಯ ಲೋಪವೆಸಗಿರುತ್ತಾರೆ. ಆದುದರಿಂದ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 43(ಎ) ಮತ್ತು 48(4) ರಂತೆ ಕ್ರಮ ಕೈಗೊಳ್ಳುವಂತೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (2) ರಲ್ಲಿ ಸದರಿಯವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993 ರ ಪ್ರಕರಣ 43-ಎ ರಡಿ ಕ್ರಮವಹಿಸುವ ಪೂರ್ವದಲ್ಲಿ ನಿಯಮಾನುಸಾರ ಕಾರಣ ಕೇಳುವ ನೋಟೀಸನ್ನು ದಿನಾಂಕ:01.01.2018 ರಂದು ಜಾರಿ ಮಾಡಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (3) ರಲ್ಲಿ ಸದರಿಯವರು ಕಾರಣ ಕೇಳುವ ನೋಟೀಸಿಗೆ ಈ ಕೆಳಕಂಡಂತೆ ಉತ್ತರ ಸಲ್ಲಿಸಿರುತ್ತಾರೆ.

* ಹೆಗ್ಗೆರೆ ಗ್ರಾಮ ಪಂಚಾಯಿತಿಯಲ್ಲಿ 2015-16 ಮತ್ತು 2016-17ನೇ ಸಾಲಿನಲ್ಲಿ ನಿಧಿ-1 ಮತ್ತು ನಿಧಿ-2 ರಲ್ಲಿ ಸಮಾಗ್ರಿಗಳ ಖರೀದಿಯಲ್ಲಿ ನಿಯಮಬಾಹಿರವಾಗಿ ಹಣ ಪಾವತಿಸಿರುವುದಿಲ್ಲ ಮತ್ತು ಖರೀದಿಸಿದ ಸಾಮಾಗ್ರಿಗಳಿಗೆ ಹಣ ಪಾವತಿಸುವ ಮೊದಲು ನಿಯಮಾನುಸಾರವಾಗಿ ಅಂದರೆ ಪ್ರಕಟಣೆ, ತುಲನಾತ್ಮಕ ದರಪಟ್ಟಿ ಬಿಲ್ಲುಗಳನ್ನೊಳಗೊಂಡ ಎಲ್ಲಾ ಕಡತವನ್ನು ಪರಿಶೀಲಿಸುವ ಜನಾಬ್ದಾರಿ ಸಂಬಂಧಪಟ್ಟ ಗ್ರಾಮ ಪಂಚಾಯಿತಿ ಅಧಿಕಾರಗಳದ್ದಾಗಿರುತ್ತದೆ.
* ನನಗೆ ಯಾವುದೇ ತರಬೇತಿ ಸಂಸ್ಥೆಯಿಂದ ಲೆಕ್ಕ ಪತ್ರಗಳ ನಿರ್ವಹಣೆಯ ಕುರಿತು ತರಬೇತಿಯನ್ನು ನೀಡಿರುವುದಿಲ್ಲ. ಆದರೆ ಸಾಮಾಗ್ರಿಗಳನ್ನು ಖರೀದಿ ಮಾಡುವ ಕುರಿತು ನನಗೆ ಸಂಪೂರ್ಣ ಮಾಹಿತಿ ಇದ್ದು, ಅವುಗಳ ಉತ್ತಮ ಗುಣಮಟ್ಟದಿಂದ ಕೂಡಿದ್ದರಿಂದ ಹಣ ಪಾವತಿಗೆ ಕ್ರಮ ವಹಿಸಿರುತ್ತೇನೆ.
* ವೈಯಕ್ತಿಕವಾಗಿ ಮತ್ತು ಉದ್ದೇಶಪೂರ್ವಕವಾಗಿ ಯಾವುದೇ ನಿಧಿಯಿಂದಲೂ ಹಣವನ್ನು ದುರ್ಬಳಕೆ ಮಾಡಿರುವುದಿಲ್ಲ.
* ಗ್ರಾಮ ಪಂಚಾಯಿತಿಯಲ್ಲಿ ಸಾಮಾನ್ಯ ಸಭೆಯನ್ನು ನಡೆಸುವ ಬಗ್ಗೆ ಕುರಿಡು ಗ್ರಾಮ ಪಂಚಾಯಿತಿ ಅಧಿಕಾರಿಗಳು ಕಛೇರಿ ಟಿಪ್ಪಣಿಯನ್ನು ತಯಾರಿಸಿ ತರುವಂತೆ ಸೂಚಿಸಿದ್ದರೂ ಯಾವುದೇ ಪ್ರಯೋಜನವಾಗಿರುವುದಿಲ್ಲ. ಆದುದರಿಂದ ಸಭೆ ನಡೆಸಲು ಆಗಿರುವುದಿಲ್ಲ ಹಾಗೂ ಮುಂದಿನ ಸಭೆ ನಡೆಸಲು ಕರೆದಾಗ ಅಧಿಕಾರಿಗಳು ಹಾಗೂ ಈ ಮಧ್ಯೆ ಶಿಕ್ಷಕರ ಕ್ಷೇತ್ರ ವಿಧಾನಪರಿಷತ್ ಚುನಾವಣೆ ಇದ್ದ ಕಾರಣ ಸಭೆಯನ್ನು ನಡೆಸಲು ಸಾಧ್ಯವಿರುವುದಿಲ್ಲವೆಂದು ಅಧಿಕಾರಿಗಳು ತಿಳಿಸಿರುತ್ತಾರೆ ಮತ್ತು ಈ ಮಧ್ಯೆ ನನಗೆ ತೀವ್ರ ಸ್ವರೂಪದ ಅನಾರೋಗ್ಯ ಉಂಟಾಗಿರುತ್ತದೆ. ಆದಕಾರಣ ಎರಡು ಸಭೆಗಳನ್ನು ನಡೆಸಲು ಸಾಧ್ಯವಾಗಿರುವುದಿಲ್ಲ. ದಿನಾಂಕ:22.02.2017 ರಿಂದ ಈವರೆವಿಗೂ ಸಭೆಗಳನ್ನು ನಿಯಮಾನುಸಾರ ನಡೆಸಲಾಗಿರುತ್ತದೆಂದು ತಿಳಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (4) ರಲ್ಲಿ ಮಾನ್ಯ ಕಾರ್ಯದರ್ಶಿಯವರ ನ್ಯಾಯಾಲಯದಲ್ಲಿ ದಿನಾಂಕ:29.01.2019 ರಂದು ನಡೆದ ವಿಚಾರಣೆಯಲ್ಲಿ ಶ್ರೀಮತಿ ಮಂಜುಳ.ಬಿ.ಎನ್, ಅಧ್ಯಕ್ಷರು, ಹೆಗ್ಗೆರೆ ಗ್ರಾಮ ಪಂಚಾಯಿತಿ, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ತುಮಕೂರು ತಾಲ್ಲೂಕು, ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಹೆಗ್ಗೆರೆ ಗ್ರಾಮ ಪಂಚಾಯತಿ, ಇಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಹೆಗ್ಗೆರೆ ಗ್ರಾಮ ಪಂಚಾಯತಿ ರವರುಗಳು ಹಾಜರಿದ್ದು, ತಮ್ಮ ಹೇಳಿಕೆಗಳನ್ನು ತಿಳಿಸಿರುತ್ತಾರೆ. ಮತ್ತು ಹೆಚ್ಚಿನ ಹೇಳಿಕೆ ಇರುವುದಿಲ್ಲವೆಂದು ತಿಳಿಸಿರುತ್ತಾರೆ. ಪ್ರಕರಣವನ್ನು ಆದೇಶಕ್ಕಾಗಿ ಕಾಯ್ದಿರಿಸಲಾಯಿತು.

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 43-ಎ(1)(i)(iii) ಮತ್ತು 48(4) ಸರ್ಕಾರವು, ಗ್ರಾಮ ಪಂಚಾಯತ್‌ನ ಶಿಫಾರಸ್ಸಿನಂತೆ ಅಥವಾ ಅನ್ಯಥಾ ಯಾವೊಬ್ಬ ಸದಸ್ಯನನ್ನು ಅವನ್ನು ಪಂಚಾಯತ್‌ನ ನಾಲ್ಕು ಒಂದಾದ ಮೇಲೊಂದಂತೆ ಆದ ಸಭೆಗಳಿಗೆ ಹಾಜರಾಗಲು ತಪ್ಪಿದ್ದರೆ, ಅಂಥಹ ಸದಸ್ಯನನ್ನು ಸದಸ್ಯತ್ವ ಸ್ಥಾನದಿಂದ, ಅಧ್ಯಕ್ಷನಾಗಲಿ ಅಥವಾ ಉಪಾಧ್ಯಕ್ಷನಾಗಲಿ ಸಭೆಯನ್ನು ಕರೆಯಬೇಕಾಗಿದ್ದಾಗ ಅಥವಾ ಅಗತ್ಯವಾಗಿದ್ದಾಗ ಒಂದಾದ ಮೇಲೊಂದರಂತೆ ನಡೆಯಬೇಕಾದ ಎರಡು ಸಭೆಗಳನ್ನು ಕರೆಯಲು ತಪ್ಪಿದ್ದಾನೆಂದು ತಪ್ಪಿದ್ದರೆ ಅವನಿಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶ ನೀಡಿದ ನಂತರ ಮತ್ತು ಅಗತ್ಯವೆಂದು ತಾನು ಭಾವಿಸಿದಂಥ ವಿಚಾರಣೆ ಮಾಡಿದ ನಂತರ ತೆಗೆದು ಹಾಕುವುದು ಸೂಕ್ತವೆಂದು ಭಾವಿಸಿದ್ದರೆ ಆ ಸದಸ್ಯನ ಸದಸ್ಯತ್ವ ಸ್ಥಾನ ಮತ್ತು ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನದಿಂದ ತೆಗೆದುಹಾಕಬಹುದು ಎಂದು ಉಲ್ಲೇಖಿಸಲಾಗಿದೆ.

ಸರ್ಕಾರವು ಲಭ್ಯವಿರುವ ಎಲ್ಲಾ ಸಾಕ್ಷ್ಯಾಧಾರಗಳು, ದಾಖಲಾತಿಗಳು, ಆಪಾದಿತರ ಲಿಖಿತ ಮತ್ತು ಮೌಖಿಕ ಹೇಳಿಕೆಗಳನ್ನು ಪರಿಶೀಲಿಸಿ, ಲಭ್ಯವಿರುವ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಲಾಗಿ, ಶ್ರೀಮತಿ ಮಂಜುಳ.ಬಿ.ಎನ್, ಅಧ್ಯಕ್ಷರು, ಹೆಗ್ಗೆರೆ ಗ್ರಾಮ ಪಂಚಾಯಿತಿ, ರವರು ಅನುಮತಿ ಪಡೆಯದೆ

ಪಂಚಾಯತ್‌ನ ನಾಲ್ಕು ಒಂದಾದ ಮೇಲೊಂದರಂತೆ ಆದ ಸಭೆಗಳನ್ನು ನಡೆಸದಿರುವ ಆರೋಪ ಹಾಗೂ 2016-17ನೇ ಸಾಲಿನಲ್ಲಿ ಕೇವಲ ಏಳು ಸಭೆಗಳನ್ನು ನಡೆಸಿರುತ್ತಾರೆ. 2016-17ನೇ ಸಾಲಿನ ಗ್ರಾಮ ಪಂಚಾಯಿತಿ ನಿಧಿ 1 ರಲ್ಲಿನ ಅನುದಾನವು ಗ್ರಾಮ ಪಂಚಾಯಿತಿ ಸಿಬ್ಬಂದಿಗಳ ವೇತನ ಮತ್ತು ಗ್ರಾಮ ಪಂಚಾಯಿತಿ ಚುನಾಯಿತ ಪ್ರತಿನಿಧಿಗಳ ಗೌರವ ಧನಗಳನ್ನು ಪಾವತಿಸುವ ಉದ್ದೇಶಗಳಿಗೆ ಮಾತ್ರ ಬಳಸಬೇಕಾಗಿರುತ್ತದೆ. ಆದರೆ ಸದರಿ ಅನುದಾನವನ್ನು ನಿಯಮಬಾಹಿರವಾಗಿ ಆಶ್ರಯ ಎಂಟರ್‌ಪ್ರೈಸಸ್, ತುಮಕೂರು ರವರಿಂದ ಬೀದಿ ದೀಪ ಸಾಮಾಗ್ರಿ ಖರೀದಿಸಿದ್ದು, ಒಟ್ಟು ರೂ.3,25,911/-ಗಳಾಗಿರುತ್ತದೆ. ಖರೀದಿ ಪ್ರಕ್ರಿಯೆಯಲ್ಲಿ ಪ್ರಕಟಣೆ, ವೋಚರ್ಸ್, ತುಲನಾತ್ಮಕ ದರಪಟ್ಟಿ ಇರುವುದಿಲ್ಲ ಮತ್ತು ಟೆಂಡರ್ ಮುಖಾಂತರ ಸಾಮಾಗ್ರಿ ಖರೀದಿಸದೆ ಕೆ.ಟಿ.ಪಿ.ಪಿ ನಿಯಮ ಉಲ್ಲಂಘಿಸಿರುತ್ತಾರೆ. 2015-16 ನೇ ಸಾಲಿನ ಗ್ರಾಮ ಪಂಚಾಯಿತಿ ನಿಧಿ 2 ರಲ್ಲಿನ ಕುಡಿಯುವ ನೀರಿನ ನಿರ್ವಹಣೆಗೆ ಅನುದಾನಕ್ಕೆ ವಿನಿಯೋಗಿಸಿದ್ದು, ರೂ.1,69,196/-ಗಳನ್ನು ಕುಡಿಯುವ ನೀರಿನ ಸಾಮಾಗ್ರಿಗಳ ಖರೀದಿ ಮಾಡಿರುತ್ತಾರೆ ಹಾಗೂ ಈ ಸಂಬಂಧ ಯಾವುದೇ ದಾಖಲಾತಿಗಳನ್ನು ಪಡೆದು ನಿಯಮಾನುಸಾರ ಕರ್ತವ್ಯ ನಿರ್ವಹಿಸದೆ ಕೆ.ಟಿ.ಪಿ.ಪಿ ನಿಯಮ ಉಲ್ಲಂಘಿಸಿರುತ್ತಾರೆ. 2015-16 ನೇ ಸಾಲಿನ ಗ್ರಾಮ ಪಂಚಾಯಿತಿನಿಧಿ 2 ರಲ್ಲಿ ರೂ.15,500/-ಗಳ ಮೊತ್ತವನ್ನು ಶೆಟ್ಟಪ್ಪನಪಾಳ್ಯ ಮುಖ್ಯ ರಸ್ತೆಯಲ್ಲಿ ಜಂಗಲ್ ತೆಗೆಯುವ ಕಾಮಗಾರಿಗೆ ನೀಡಿದ್ದು, ಸದರಿ ಕಾಮಗಾರಿಯನ್ನು ಕ್ರಿಯಾ ಯೋಜನೆಯಲ್ಲಿ ಅಳವಡಿಸಿ ಸಂಬಂಧಪಟ್ಟವರಿಂದ ಅನುಮೋದನೆ ಪಡೆದಿರುವುದಿಲ್ಲ ಮತ್ತು ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಲ್ಲಿ ಅಳವಡಿಸಿ, ಹಣ ಪಾವತಿ ಮಾಡದೆ ಸರ್ಕಾರದ ಆದೇಶವನ್ನು ಉಲ್ಲಂಘಿಸಿ ಹಣ ಪಾವತಿಸಿ ಕರ್ತವ್ಯ ಲೋಪವೆಸಗಿರುವ ಆರೋಪವು ಸಾಬೀತಾಗಿರುವುದರಿಂದ ಇವರನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 43-ಎ(1)(i)(iii) ಮತ್ತು 48(4)ರನ್ವಯ ಹೆಗ್ಗೆರೆ ಗ್ರಾಮ ಪಂಚಾಯಿತಿ ಅಧ್ಯಕ್ಷ ಸ್ಥಾನ ಮತ್ತು ಸದಸ್ಯ ಸ್ಥಾನದಿಂದ ತೆಗೆದು ಹಾಕಲು ನಿರ್ಣಯಿಸಿದೆ.

ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 1057 ಗ್ರಾಪಂಅ 2017.**
**ಬೆಂಗಳೂರು, ದಿನಾಂಕ: 20.03.2019.**

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಲಭ್ಯವಿರುವ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಲಾಗಿ, ಶ್ರೀಮತಿ ಮಂಜುಳ.ಬಿ.ಎನ್, ಅಧ್ಯಕ್ಷರು, ಹೆಗ್ಗೆರೆ ಗ್ರಾಮ ಪಂಚಾಯಿತಿ, ರವರು ಅನುಮತಿ ಪಡೆಯದೆ ಪಂಚಾಯತ್‌ನ ನಾಲ್ಕು ಒಂದಾದ ಮೇಲೊಂದರಂತೆ ಆದ ಸಭೆಗಳನ್ನು ನಡೆಸದಿರುವ ಆರೋಪ ಹಾಗೂ 2016-17ನೇ ಸಾಲಿನಲ್ಲಿ ಕೇವಲ ಏಳು ಸಭೆಗಳನ್ನು ನಡೆಸಿರುತ್ತಾರೆ. 2016-17ನೇ ಸಾಲಿನ ಗ್ರಾಮ ಪಂಚಾಯಿತಿ ನಿಧಿ 1 ರಲ್ಲಿನ ಅನುದಾನವು ಗ್ರಾಮ ಪಂಚಾಯಿತಿ ಸಿಬ್ಬಂದಿಗಳ ವೇತನ ಮತ್ತು ಗ್ರಾಮ ಪಂಚಾಯಿತಿ ಚುನಾಯಿತ ಪ್ರತಿನಿಧಿಗಳ ಗೌರವ ಧನಗಳನ್ನು ಪಾವತಿಸುವ ಉದ್ದೇಶಗಳಿಗೆ ಮಾತ್ರ ಬಳಸಬೇಕಾಗಿರುತ್ತದೆ. ಆದರೆ ಸದರಿ ಅನುದಾನವನ್ನು ನಿಯಮಬಾಹಿರವಾಗಿ ಆಶ್ರಯ ಎಂಟರ್‌ಪ್ರೈಸಸ್, ತುಮಕೂರು ರವರಿಂದ ಬೀದಿ ದೀಪ ಸಾಮಾಗ್ರಿ ಖರೀದಿಸಿದ್ದು, ಒಟ್ಟು ರೂ.3,25,911/-ಗಳಾಗಿರುತ್ತದೆ. ಖರೀದಿ ಪ್ರಕ್ರಿಯೆಯಲ್ಲಿ ಪ್ರಕಟಣೆ, ವೋಚರ್ಸ್, ತುಲನಾತ್ಮಕ ದರಪಟ್ಟಿ ಇರುವುದಿಲ್ಲ ಮತ್ತು ಟೆಂಡರ್ ಮುಖಾಂತರ ಸಾಮಾಗ್ರಿ ಖರೀದಿಸದೆ ಕೆ.ಟಿ.ಪಿ.ಪಿ ನಿಯಮ ಉಲ್ಲಂಘಿಸಿರುತ್ತಾರೆ. 2015-16 ನೇ ಸಾಲಿನ ಗ್ರಾಮ ಪಂಚಾಯಿತಿ ನಿಧಿ 2 ರಲ್ಲಿನ ಕುಡಿಯುವ ನೀರಿನ ನಿರ್ವಹಣೆಗೆ ಅನುದಾನಕ್ಕೆ ವಿನಿಯೋಗಿಸಿದ್ದು, ರೂ.1,69,196/-ಗಳನ್ನು ಕುಡಿಯುವ ನೀರಿನ ಸಾಮಾಗ್ರಿಗಳ ಖರೀದಿ ಮಾಡಿರುತ್ತಾರೆ ಹಾಗೂ ಈ ಸಂಬಂಧ ಯಾವುದೇ ದಾಖಲಾತಿಗಳನ್ನು ಪಡೆದು ನಿಯಮಾನುಸಾರ ಕರ್ತವ್ಯ ನಿರ್ವಹಿಸದೆ ಕೆ.ಟಿ.ಪಿ.ಪಿ ನಿಯಮ ಉಲ್ಲಂಘಿಸಿರುತ್ತಾರೆ. 2015-16 ನೇ ಸಾಲಿನ ಗ್ರಾಮ ಪಂಚಾಯಿತಿನಿಧಿ 2 ರಲ್ಲಿ ರೂ.15,500/-ಗಳ ಮೊತ್ತವನ್ನು ಶೆಟ್ಟಪ್ಪನಪಾಳ್ಯ ಮುಖ್ಯ ರಸ್ತೆಯಲ್ಲಿ ಜಂಗಲ್ ತೆಗೆಯುವ ಕಾಮಗಾರಿಗೆ ನೀಡಿದ್ದು, ಸದರಿ ಕಾಮಗಾರಿಯನ್ನು ಕ್ರಿಯಾ ಯೋಜನೆಯಲ್ಲಿ ಅಳವಡಿಸಿ ಸಂಬಂಧಪಟ್ಟವರಿಂದ ಅನುಮೋದನೆ ಪಡೆದಿರುವುದಿಲ್ಲ ಮತ್ತು ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಲ್ಲಿ ಅಳವಡಿಸಿ, ಹಣ ಪಾವತಿ ಮಾಡದೆ ಸರ್ಕಾರದ ಆದೇಶವನ್ನು ಉಲ್ಲಂಘಿಸಿ ಹಣ ಪಾವತಿಸಿ ಕರ್ತವ್ಯ ಲೋಪವೆಸಗಿರುವ ಆರೋಪವು ಸಾಬೀತಾಗಿರುವುದು ಕಂಡುಬಂದಿರುವುದನ್ನು ಗಮನಿಸಿ, ಇವರ ವಿರುದ್ಧ

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 43-ಎ(1)(i)(iii) ಮತ್ತು 48(4) ರನ್ವಯ ಶ್ರೀಮತಿ ಮಂಜುಳ.ಬಿ.ಎನ್, ಅಧ್ಯಕ್ಷರು, ಹೆಗ್ಗೆರೆ ಗ್ರಾಮ ಪಂಚಾಯಿತಿ, ತುಮಕೂರು ತಾಲ್ಲೂಕು, ತುಮಕೂರು ಜಿಲ್ಲೆ, ಇವರನ್ನು ಹೆಗ್ಗೆರೆ ಗ್ರಾಮ ಪಂಚಾಯಿತಿಯ ಸದಸ್ಯತ್ವ ಸ್ಥಾನ ಹಾಗೂ ಅಧ್ಯಕ್ಷ ಸ್ಥಾನದಿಂದ ತಕ್ಷಣದಿಂದ ಜಾರಿಗೆ ಬರುವಂತೆ ತೆಗೆದು ಹಾಕಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಮುಬಾರಕ್ ಅಹ್ಮದ್) 2013
ಉಪನಿರ್ದೇಶಕರು ಮತ್ತು ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ:

1) ಮುಖ್ಯ ಕಾರ್ಯನಿರ್ವಾಹಕಾಧಿಕಾರಿ, ತುಮಕೂರು ಜಿಲ್ಲಾ ಪಂಚಾಯಿತಿ, ತುಮಕೂರು ಜಿಲ್ಲೆ.
2) ಕಾರ್ಯನಿರ್ವಾಹಕಾಧಿಕಾರಿ, ತುಮಕೂರು ತಾಲ್ಲೂಕು ಪಂಚಾಯಿತಿ, ತುಮಕೂರು ಜಿಲ್ಲೆ.
3) ಶ್ರೀಮತಿ ಮಂಜುಳ.ಬಿ.ಎನ್, ಅಧ್ಯಕ್ಷರು, ಹೆಗ್ಗೆರೆ ಗ್ರಾಮ ಪಂಚಾಯಿತಿ, ತುಮಕೂರು ತಾಲ್ಲೂಕು, ತುಮಕೂರು ಜಿಲ್ಲೆ.
4) ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಹೆಗ್ಗೆರೆ ಗ್ರಾಮ ಪಂಚಾಯಿತಿ, ತುಮಕೂರು ತಾಲ್ಲೂಕು, ತುಮಕೂರು ಜಿಲ್ಲೆ.
5) ಗಣಕ ಕೋಶ-ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
6) ಕಛೇರಿ ಪ್ರತಿ/ಹೆಚ್ಚುವರಿ ಪ್ರತಿ.

ಪ್ರತಿಯನ್ನು ಮಾಹಿತಿಗಾಗಿ:

1) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2) ಸರ್ಕಾರದ ಕಾರ್ಯದರ್ಶಿಗಳು (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಆಪ್ತಕಾರ್ಯದರ್ಶಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3) ನಿರ್ದೇಶಕರು(ಪಂ,ರಾಜ್-1), ಗ್ರಾ.ಅ ಮತ್ತು ಪಂ.ರಾಜ್ ಇಲಾಖೆ ಇವರ ಆಪ್ತ ಸಹಾಯಕರು.